ಅಂಕಿ ಅಂಶಗಳು ತಪ್ಪೆಂದರೆ ಅವರು ಏನು ಹೇಳುತ್ತಾರೆ?

ಶ್ರೀ ಎಂ. ಶಂಕರಲಿಂಗೇಗೌಡರು.—ನಾನು ಸರಿಮಾಡುತ್ತೇನೆ (ನಗೂ.)

ಶ್ರೀ ಕೆ. ಹನುಮಂತಯ್ಯನವರು.—ನಮ್ಮ ಲೆಕ್ಕದಲ್ಲಿ ಅವರು ಎಲ್ಲೆಲ್ಲಿ ಕರಾರುವಾಕ್ಕಾಗಿಲ್ಲ ವೆಂದು ತೋರಿಸುತ್ತಾರೋ, ಅಲ್ಲಿ ನಾವೂ ಸರಿ ಪಡಿಸುತ್ತೇವೆ. (ನಗೂ.)

ಶ್ರೀ ಎಂ. ಶಂಕರಲಿಂಗೇಗೌಡರು.—1949ರಲ್ಲಿ 25 ಸಾವಿರ ಪಲ್ಲ ಬತ್ತ ಬಂದಾಗ 933 ಪಲ್ಲ ತೆಗೆದುಕೊಂಡಿರಿ, ಆದರೆ 1950 ರಲ್ಲಿ 15 ಸಾವಿರ ಪಲ್ಲ ಬಂದಾಗ 1,676 ಪಲ್ಲ ತೆಗೆದುಕೊಂಡಿದ್ದೀರಿ, ಏಕೆ?

Sri H. SIDDAVEERAPPA.—That is with regard to procurement.

Sri M. SHANKAR LINGE GOWDA.—That is what I am also telling your honour. (Laughter).

ಶ್ರೀ ಎಚ್. ಸಿದ್ದವೀರಪ್ಪನವರು.—ಆ ವರ್ಷ ಪ್ರೊಕ್ಯೂರ್‌ಮೆಂಟ್ ಕಡಿಮೆಯಾಗಿದೆ.

ಶ್ರೀ ಎಂ. ಶಂಕರಲಿಂಗೇಗೌಡರು.—ಏಕೆ?

ಶ್ರೀ ಎಚ್. ಸಿದ್ದವೀರಪ್ಪನವರು.—Seasonal conditions, ಮುಂತಾದ ನಾನಾ ಕಾರಣಗಳಿರುತ್ತವೆ.

ಶ್ರೀ ಎಂ. ಶಂಕರಲಿಂಗೇಗೌಡರು.—1952ರಲ್ಲಿ ಎಷ್ಟು ಉತ್ಪತ್ತಿಯಾಗಿದೆಯೆಂದು ಬಂದಿದೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಇನ್ನೂ ನಮಗೆ ಲೆಕ್ಕ ಬಂದಿಲ್ಲ.

ಶ್ರೀ ಎಂ. ಶಂಕರಲಿಂಗೇಗೌಡರು.—ಮೇ ತಿಂಗಳ ಕೊನೆಯವರೆಗೆ ಇಷ್ಟು ಪ್ರೊಕ್ಯೂರ್ ಆಗಿದೆ ಎಂದು ತಿಳಿಸಿದ್ದೀರಲ್ಲಾ, ಅದನ್ನು ತರಿಸಲಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಎಷ್ಟೆಷ್ಟು ವಸೂಲು ಮಾಡಿದ್ದೇವೋ ಅಷ್ಟನ್ನು ಲೆಕ್ಕದಲ್ಲಿ ತೋರಿಸಿದೆ. If you want to ask any further supplementary, I am prepared to answer that.

ಶ್ರೀ ಎಂ. ಶಂಕರಲಿಂಗೇಗೌಡರು—ನಾನು ಸುಮ್ಮನೆ ಟೀಕೆ ಮಾಡುತ್ತಿಲ್ಲ. ಜನರಿಗೆ ಎಷ್ಟು ಕಷ್ಟ ಎಂಬುದನ್ನು ತಿಳಿಸುತ್ತಿದ್ದೇನೆ. ಹಿಂದಿನ 5 ವರ್ಷಗಳಿಗಿಂತ ಈ ವರ್ಷ ಜಾಸ್ತಿ ಬಂದಿದೆ. ನಮ್ಮ ಗ್ರೋ ಮೋರ್ ಫುಡ್ ಯೋಜನೆಯಿಂದ ಜಾಸ್ತಿಯಾಗಿದೆಯೆಂದು ಹೇಳಿದಮೇಲೆ, 1950ರಲ್ಲಿ 1,676 ಪಲ್ಲದಿಂದ 1952ರಲ್ಲಿ 953 ಪಲ್ಲಕ್ಕೆ ಏಕೆ ಬಂತು?

ಶ್ರೀ ಎಚ್. ಸಿದ್ದವೀರಪ್ಪನವರು.—ಅಷ್ಟೇ ವಸೂಲು ಮಾಡಿರುವುದು.

ಶ್ರೀ ಎಂ. ಶಂಕರಲಿಂಗೇಗೌಡರು.—ನಾನು ಹೇಳಿದರೆ ತಮಗೆ ಕೋಪ ಬರಬಹುದು.

Sri K. HANUMANTHAIYA.—We can go to the next question Sir.

Working of Bulldozers.

Q.—223. Sri V. M. MASCARENHAS (St. John's Hill).—

Will the Government be pleased to state:—

(*a*) the number of bulldozers owned by them on 1st April 1952;

(*b*) the number in working condition;

(*c*) the total number of working hours of the above for the twelve months ended 31st March 1952;

(*d*) if any of these have worked for private parties during 1951-52, and if so, the number of days;

(*e*) if the reply is in affirmative the number of days so worked and the income derived therefrom?

A.—Sri H. SIDDAVEERAPPA (Minister for Home Affairs and Agriculture).—

(*a*) 25.
(*b*) 18.
(*c*) 11,400 hours.
(*d*) (i) Yes.
(ii) 1,091 days.
(*e*) Rs. 1,06,674.

Sri V. M. MASCARENHAS.—Are all these bulldozers kept busy throughout the year or are some of them kept idle?

Sri H. SIDDAVEERAPPA.—They will be kept busy throughout the year.

Sri V. M. MASCARENHAS.—If so, from your answer, shall I understand that they work at the average rate of 2·4 hours per day ?

Sri H. SIDDAVEERAPPA.—Sir, sometimes the work will be slow on account of the machinery being sick and also due to various other causes.

Sri V. M. MASCARENHAS.—From your figures Sir, I find that of the total number of 11,400 hours, they have worked for about 9,000 hours for the public ; does it mean that for the remaining 2,400 hours they have worked for the Department ?

Sri H. SIDDAVEERAPPA.—I have given the actual working as machines have actually worked.

Sri V. M. MASCARENHAS.—You say Sir, that the machines have worked during the year for only 11,400 hours and for the public for 1,091 days which I actually take at 9,000 hours. Is it that the bulldozers have worked for the Department only for 2,500 hours in the year ? Am I right ?

Sri H. SIDDAVEERAPPA.—I want to calculate and arrive at that figure Sir.

ಶ್ರೀ ಕೆ. ವಿ. ಶಂಕರಗೌಡರು (ಮಂಡ್ಯ).—ಈ ಪ್ರಶ್ನೆಗೆ ಕೊಟ್ಟಿರುವ ಉತ್ತರದ (d) (ii) ನೆಯ ಭಾಗದಲ್ಲಿ 1,091 ದಿನಗಳು ಖಾಸಗೀ ಜನರ ಕೆಲಸಮಾಡಿವೆಯೆಂದು ತಿಳಿಸಲಾಗಿದೆ. ಆದರಲ್ಲಿ ಮಂತ್ರಿಗಳ ಕೆಲಸವನ್ನು ಎಷ್ಟು ದಿನ ಮಾಡಿದೆಯೆಂಬುನ್ನು ಹೇಳುವುದಕ್ಕೆ ಸಾಧ್ಯವೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಮಂತ್ರಿಗಳ ಜಮೀನಿನಲ್ಲಿ, ನೀವು ಕೇಳತಕ್ಕ ಕಾಲದಲ್ಲಿ, ಎಲ್ಲಿಯೂ ಕೆಲಸಮಾಡಿದ್ದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ವಿ. ಶಂಕರಗೌಡರು.—(e) ಪ್ರಶ್ನೆಗೆ ಉತ್ತರವಾಗಿ 1,06,674 ರೂಪಾಯಿ ಬಂದಿದೆ ಎಂದು ತಿಳಿಸಲಾಗಿದೆ. ಇದು ಪೂರ್ತಿ ವಸೂಲಾಗಿದೆಯೋ ಅಥವಾ ಇನ್ನೂ ಬರತಕ್ಕದ್ದಿದೆಯೊ ?

ಶ್ರೀ ಎಚ್. ಸಿದ್ದವೀರಪ್ಪನವರು.—ಪೂರ್ತಿ ವಸೂಲಾಗಿಲ್ಲ ; ಇನ್ನೂ ಕೆಲವು ಬಾಕಿ ಇವೆ.

ಶ್ರೀ ಕೆ. ವಿ. ಶಂಕರಗೌಡರು.—ಹಣ ಸಂದಾಯವಾಗುವುದಕ್ಕೆಂತ ಮುಂಚೆ ವರಮಾನ ಎಂದು ಹೇಗೆ ಹಾಕಿದ್ದಿರಿ?

ಶ್ರೀ ಎಚ್. ಸಿದ್ದವೀರಪ್ಪನವರು.—ಬರುತ್ತದೆ ಎಂದು ಹಾಕಿದ್ದೇವೆ.

Sri M. V. RAMA RAO (Tumkur).—May I know Sir, how long these seven bulldozers have been out of order ?

Sri H. SIDDAVEERAPPA.—Roughly for the last one year.

Sri M. V. RAMA RAO.—What arrangements have the Government made to bring them in to working condition ?

Sri H. SIDDAVEERAPPA.—My main difficulty Sir, is a number of spare parts are not available in India. We have placed orders overseas and we have not been getting spares. Efforts are being made to get spare parts at the earliest possible time and firm orders have been placed. As soon as spare parts are available, these will be repaired and put into use.

Sri M. V. RAMA RAO.—May I know whether these seven bulldozers are not put into use only for want of spare parts or is there any other reason ?

Sri H. SIDDAVEERAPPA.—Entirely for want of spare parts, Sir.

ಶ್ರೀ ಎಚ್. ಕೆ. ವೀರಣ್ಣ ಗೌಡರು (ಮದ್ದೂರು).—ಬುಲ್‌ಡೋಜರುಗಳು ಇಷ್ಟು ಗಂಟೆಗಳ ಕಾಲ ಕೆಲಸಮಾಡಿವೆಯೆಂದು ತಿಳಿಸಿದೆ. ಹೀಗೆ ಇಷ್ಟು ದಿವಸ, ಇಷ್ಟು ಗಂಟೆ ಕಾಲ ಕೆಲಸಮಾಡಿವೆ ಎಂಬುದನ್ನು ಯಾವ ಆಧಾರದಮೇಲೆ ಹೇಳುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪನವರು.—ನಮಗೆ ಬಂದ ವರದಿಯ ಆಧಾರದ ಮೇಲೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ವರದಿಯಲ್ಲಿರುವ ಅಂಶವನ್ನು ಹೊರಪಡಿಸುವುದಕ್ಕೆ ಸಾಧ್ಯವೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಮಾನ್ಯ ಸದಸ್ಯರಿಗೆ ಇನ್ನೇನಾದರೂ ಹೆಚ್ಚು ವಿವರಗಳು ಬೇಕಾದರೆ ಕೊಡುವುದಕ್ಕೆ ಸಿದ್ಧವಾಗಿದೇನೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಇಷ್ಟು ಗಂಟೆ ಕೆಲಸಮಾಡಿವೆಯೆಂದು ಯಾವ ಆಧಾರದ

ಮೇಲೆ ಲೆಕ್ಕಹಾಕುತ್ತೀರಿ? ಆ ಯಿ ಲ್, ಪೆಟ್ರೋಲ್ ಖರ್ಚಾಗಿರುವುದರ ಮೇಲೆ ಸಾಮಾನ್ಯವಾಗಿ ಲೆಕ್ಕ ಹಾಕುತ್ತೀರಿ. ಯಾರು ವರದಿಯನ್ನು ಕಳುಹಿಸಿದುದು, ಅವರು ಕಳುಹಿಸಿದ ವರದಿ ಸರಿಯೇ, ಕೆಲಸಮಾಡುವುದರಲ್ಲಿ ಅಷ್ಟು ಪೆಟ್ರೋಲು, ಎಣ್ಣೆ ಖರ್ಚಾಗಿದೆಯೆ ಅಥವಾ ಪೆಟ್ರೋಲು, ಆಯಿಲ್ ಇವುಗಳನ್ನು ಕದ್ದು ಮಾರಿ ಈರೀತಿ ಲೆಕ್ಕ ಹಾಕಿದ್ದರೆ ಅದನ್ನು ಒಪ್ಪುತ್ತೀರಾ? ಅನೇಕ ಬುಲ್‌ಡೋಜರುಗಳ ಮೀಟರುಗಳು ಕೆಲಸಮಾಡುವುದಿಲ್ಲ, ಕೆಟ್ಟುಹೋಗಿವೆ ಎಂಬುದು ತಮಗೆ ಗೊತ್ತಿದೆಯೆ?

Sri H. SIDDAVEERAPPA.—Bearing in mind the several points raised by the Hon'ble Member, I will get it examined. These are all matters of detail. I understand the meter is there in all these bulldozers and the meter shows us the actual number of working hours.

Sri S. SRINIVASA IYENGAR (T.-Narasipur).—Under whose control do the bulldozers work?

Sri H. SIDDAVEERAPPA.—Under the control of the Department of Agriculture.

Sri S. SRINIVASA IYENGAR.—Will the Government be pleased to state whether they have any movement programme for these bulldozers?

Sri H. SIDDAVEERAPPA.—According to the needs and the demands the bulldozers will be allocated, because that is a commodity which is in great demand. We will have to satisfy the demands of the several parts of the State and we will allocate them according to the demands.

Sri S. SRINIVASA IYENGAR.—My question was, have they any programme just to use these bulldozers throughout the State?

Sri H. SIDDAVEERAPPA.—The programme is to meet the demand whenever and wherever it arises.

Sri S. SRINIVASA IYENGAR.—Since the bulldozers have been with the private parties for 1,091 days, what was the number of private parties that had the use of these bulldozers?

Sri H. SIDDAVEERAPPA.—I have got a big list of those that had the benefit of these bulldozers.

Sri S. SRINIVASA IYENGAR.—The total number.

Sri H. SIDDAVEERAPPA.—Seven in Mysore District, six in Bangalore District, in Chikmagalur District five, Mandya District five, Chitaldrug District four, Hassan District two, Kolar District one and Tumkur District two.

Sri S. SRINIVASA IYENGAR.—Will the Government be pleased to state whether there is no order that the charges for the bulldozers are to be paid in advance?

Sri H. SIDDAVEERAPPA.—Yes.

Sri S. SRINIVASA IYENGAR.—If so, has that order been enforced strictly?

Sri H. SIDDAVEERAPPA.—I cannot say that it has been strictly enforced. The suggestion of the Hon'ble Member will be borne in mind and the rule will be strictly adhered to.

Sri S. SRINIVASA IYENGAR.—In view of the fact that so many applications will come for the services of bulldozers, will the Government be pleased to indent for more bulldozers?

Sri H. SIDDAVEERAPPA.—Before I think of purchasing more bulldozers, I am interested in seeing that the available bulldozers are perfectly repaired and the maximum amount of work is extracted from them.

Sri S. SRINIVASA IYENGAR.—In view of the reply which the Hon'ble Minister has now given, will the Government be pleased to state if stores for spare parts will be maintained?

Sri H. SIDDAVEERAPPA.—The suggestion of the Hon'ble Member will be examined.

ಶ್ರೀ ಜಿ. ವಿ. ತಿಮ್ಮಪ್ಪಗೌಡರು (ಅರಕಲಗೂಡು).—ಈ ಬುಲ್‌ಡೋಜರ್ಸ್‌ಗಳ ಬಗ್ಗೆ ಒಂದು ವರ್ಷದ ಸಿಬ್ಬಂದಿಯ ವೆಚ್ಚ ಎಷ್ಟಾಗುತ್ತದೆ?

ಶ್ರೀ ಎಚ್. ಸಿದ್ದವೀರಪ್ಪನವರು.—ನೋಟೀಸ್.

ಶ್ರೀ ಜಿ. ಎ ತಿಮ್ಮಪ್ಪಗೌಡರು.—ಈ ಬುಲ್ ಡೋಜರ್ಸ್‌ಗಳಿಗಾಗಿ ತಾವು ಹಾಕಿರತಕ್ಕ ಒಟ್ಟು ಬಂಡವಾಳವೆಷ್ಟು ?

ಶ್ರೀ ಎಚ್. ಸಿದ್ದವೀರಪ್ಪನವರು —ಆ ಒಟ್ಟು ಬಂಡವಾಳ ಎಷ್ಟೆಂಬುದನ್ನು ಹೇಳುತ್ತೇನೆ.

We purchased 10 in the year 1946 at an estimated cost of Rs. 1,56,920 and we purchased the rest subsequently in the year 1949 at an estimated cost of Rs. 6,35,738.

ಶ್ರೀ ಜಿ. ಶಿವಪ್ಪನವರು (ಹೊಳಲ್ಕೆರೆ).—ಖಾಸಗೀ ಜನಗಳಿಗೆ ಈ ಬುಲ್‌ಡೋಜರ್ಸನ್ನು ಬಾಡಿಗೆಗೆ ಕೊಟ್ಟರೆ ಘಂಟೆಯೊಂದಕ್ಕೆ ತಾವೇನು ದರವನ್ನು ನಿಗದಿ ಮಾಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪನವರು.—ಬುಲ್ ಡೋಜರ್ಸ್ ಸಣ್ಣದಾಗಿದ್ದರೆ ಘಂಟೆಗೆ 15 ರೂಪಾಯಿಗಳು. ಬುಲ್‌ಡೋಜರ್ಸ್ ದೊಡ್ಡದಾಗಿದ್ದರೆ for non-agricultural purposes ಘಂಟೆಯೊಂದಕ್ಕೆ 20 ರೂಪಾಯಿಗಳಂತೆ ದರವನ್ನು ನಿಗದಿ ಮಾಡಿದ್ದೇವೆ.

ಶ್ರೀ ಜಿ. ಶಿವಪ್ಪನವರು.—ತಾವು ಈ ಕೆಲಸವನ್ನು ವ್ಯಾಪಾರದೃಷ್ಟಿಯಿಂದ ಮಾಡುತ್ತೀರೋ ಅಥವಾ ರೈತಾಪಿ ಜನರಿಗೆ ಅನುಕೂಲವಾಗಲೆಂದು ಮಾಡುತ್ತೀರೋ ?

ಶ್ರೀ ಎಚ್. ಸಿದ್ದವೀರಪ್ಪನವರು.—ಸರ್ಕಾರದವರಿಗೆ ವ್ಯಾಪಾರದೃಷ್ಟಿ ಏಂಬ ಮಾತೇ ಇಲ್ಲ.

ಶ್ರೀ ಜಿ. ಶಿವಪ್ಪನವರು.—ಹಾಗಾದರೆ ಸರ್ಕಾರಕ್ಕೆ ವಿಶೇಷ ಲುಕ್ಸಾನಾಗುವುದಿಲ್ಲವೆ ?

Sri H. SIDDAVEERAPPA.—As a matter of fact, the actual working cost is definitely more than what we are now charging. If you measure in terms of rupees, annas and pies, it will be a loss, but from the ultimate good that is derived, it may not be a loss.

ಶ್ರೀ ಕೆ. ಲಕ್ಕಪ್ಪನವರು (ಚೆನ್ನರಾಯಪಟ್ಟಣ).—ಈ ಬುಲ್‌ಡೋಜರ್ಸ್‌ಗಳನ್ನು ಅಲಾಟ್ ಮಾಡತಕ್ಕವರ್ಯಾರು ?

Mr. SPEAKER.—It was answered. It is under the control of the Department. There is a Committee, the Minister said.

ಶ್ರೀ ಕೆ. ಲಕ್ಕಪ್ಪನವರು.—ಆ ಸಮಿತಿಗಳನ್ನು ಕರೆಯುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಹಾಗೆ ಸಮಿತಿಗಳನ್ನು ಕರೆಯುವಂತೆ ಸರಿಯಾದ ವ್ಯವಸ್ಥೆ ಮಾಡಲಾಗುತ್ತದೆ.

ಶ್ರೀ ಜಿ. ವಿ. ತಿಮ್ಮಪ್ಪಗೌಡರು.—ಈ ಬುಲ್‌ಡೋಜರ್ಸ್‌ಗಳಿಗೆ ಸರಿಯಾಗಿ ಒಂದೇಸಮನಾಗಿ ಕೆಲಸ ಮಾಡಲು ಸಾಕಷ್ಟು ಡೀಸಲ್ ಆಯಿಲ್ ಒದಗಿಸುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Sri H. SIDDAVEERAPPA.—It may be one of the reasons. I will certainly attend to it.

ಶ್ರೀ ಕೆ. ಲಕ್ಕಪ್ಪನವರು.—ಪಾರ್ಟಿಗಳೇ ಆ ಆಯಿಲ್ ತಂದು ಉಪಯೋಗ ಮಾಡಿಕೊಳ್ಳುವುದಕ್ಕೆ ತಾವು ಅವಕಾಶ ಕೊಡುತ್ತೀರಾ ?

Sri H. SIDDAVEERAPPA.—I do not think that will be a practical proposition.

ಶ್ರೀ ಡಿ. ದೇವರಾಜ ಅರಸ್‌ರವರು (ಹುಣಸೂರು).—ಕೆಲಸವಿನ್ನೂ ಪೂರ್ತಿಯಾಗುವುದಕ್ಕೆ ಮುಂಚಿತವಾಗಿಯೇ ಸರ್ಕಾರದವರು ಅವರಿಂದ ಇಷ್ಟೇ ಛಾರ್ಜು ಕೊಡಬೇಕೆಂದು ವಸೂಲು ಮಾಡಿಕೊಳ್ಳುತ್ತಿದ್ದೀರಲ್ಲ; ಕೆಲಸ ಆಗದೆ ಹೇಗೆ ಆ ಛಾರ್ಜನ್ನು ಕಂಡುಹಿಡಿಯುತ್ತೀರಿ ?

Sri H. SIDDAVEERAPPA.—It is quite possible to work out, taking the rough estimate of the anticipated use of the bulldozer in that particular land on acreage basis.

ಶ್ರೀ ಡಿ. ದೇವರಾಜ ಅರಸ್‌ರವರು.—ಕೆಲಸವೇ ಆಗದಿರುವಾಗ, ಅದನ್ನು ಹೇಗೆ ನಿರ್ಧರ ಮಾಡುವಿರಿ ?

ಶ್ರೀ ಎಚ್. ಸಿದ್ದವೀರಪ್ಪನವರು.—ಘಂಟೆಗಳ ಲೆಕ್ಕದಮೇಲೆಯೂ ಅದನ್ನು ಕಂಡುಹಿಡಿಯಲು ಸಾಧ್ಯವಿದೆ.

ಶ್ರೀ ಡಿ. ದೇವರಾಜ ಅರಸ್‌ರವರು.—ಈ ಬುಲ್‌ಡೋಜರ್ಸ್‌ಗಳು ನಿಂತುಹೋದಾಗ, ಅವು ಸರಿಯಾಗಿಲ್ಲ, ಕೆಟ್ಟುಹೋಗಿರುತ್ತವೆಯೆಂದು

ಹೇಳಿ, ಆ ಬುಲ್‌ಡೋಜರ್ಸ್‌ಗಳ ಡ್ರೈವರುಗಳು ರಜಾ ತೆಗೆದುಕೊಂಡು ಹೋಗಿರತಕ್ಕ ಸಂದರ್ಭಗಳು ತಮ್ಮ ಗಮನಕ್ಕೆ ಬಂದಿವೆಯೇ ?

Mr. SPEAKER.—There may be some instances.

Sri A. BHEEMAPPA NAIK (Molakalmuru).—What is the average horse power capacity of these bulldozers ?

Sri H. SIDDAVEERAPPA.—I want notice for that particular question.

Sri A. BHEEMAPPA NAIK.—May I know the working expenses per hour for these bulldozers ?

Sri H. SIDDAVEERAPPA.— The working expenses are : If it is 45 or 45-50 H.P. it is Rs. 14 per hour. If it is 7 R.D.C. which is usually 65-70 H.P. it is Rs. 18-8-0. If it is D8-130 H.P. it is Rs. 29-6-0, I have got these charges from 45 to 130 H.P.

Sri A. BHEEMAPPA NAIK.—How many of these are put for agricultural operations and how many for non-agricultural purposes ?

Sri H. SIDDAVEERAPPA.—I am not able to give the exact figures.

Sri A. BHEEMAPPA NAIK.—Are many of these put for tank work, to remove mud from tank ?

Sri H. SIDDAVEERAPPA.—When these bulldozers were originally purchased by the Government, the object was to use them mainly for the works of the Public Works Department, that is for desilting and other Government work. The idea of giving them to private owners arose only out of the policy to bring more land under the plough, particularly jungle land. Therefore, top priority will have to be given to Government work and if any bulldozers are available, then we will release them to the public.

Sri A. BHEEMAPPA NAIK.—Has it come to the notice of the Government that bulldozers are still being used for tank work, for example, at Sangenahalli ; and in spite of the demand for agricultural needs, those bulldozers are being diverted for non-agricultural purposes ?

Sri H. SIDDAVEERAPPA.—I have already submitted that the work of the Government should have top priority.

Sri A. BHEEMAPPA NAIK.—Do the Government realise that the agricultural need must be given topmost priority ?

Sri H. SIDDAVEERAPPA—Yes. Therefore the bulldozer is used at Sangenahalli.

Sri A. BHEEMAPPA NAIK.—It is not for agricultural purpose ; it is for tank work.

Sri H. SIDDAVEERAPPA.— Tank work must precede agricultural work.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು (ಕಡೂರು).—ಸ್ವಾಮಿ, ತಾವು ಈಗತಾನೆ ಚಿಕ್ಕಮಗಳೂರು ಜಿಲ್ಲೆಯಲ್ಲಿ 5 ಟ್ರಾಕ್ಟರುಗಳಿರುತ್ತವೆಯೆಂದು ತಿಳಿಸೋಣವಾಯಿತು. ಅವು ಯಾವ ಯಾವ ತಾಲ್ಲೂಕುಗಳಲ್ಲಿರುತ್ತವೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ನಾನು ಹಾಗೆ 5 ಇವೆಯೆಂದು ತಿಳಿಸಲಿಲ್ಲವಲ್ಲಾ ?

ಅಧ್ಯಕ್ಷರು.—ಈಗತಾನೆ ಸ್ವಲ್ಪ ಹಿಂದೆ, ಚಿಕ್ಕಮಗಳೂರು ಜಿಲ್ಲೆಯಲ್ಲೋ ಏನೋ 5 ಇವೆಯೆಂದು ತಾವು ತಿಳಿಸಿದಹಾಗೆ ಭಾಸವಾಯಿತು.

ಶ್ರೀ ಎಚ್. ಸಿದ್ದವೀರಪ್ಪನವರು.—ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟಿರುತ್ತವೆಯೆಂಬ ಅಂಶ ನನಗೆ ಸದ್ಯಕ್ಕೆ ತಿಳಿಸಲು ಸಾಧ್ಯವಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಈ ಟ್ರಾಕ್ಟರುಗಳಿಂದ ಕೆಲಸ ಅಲ್ಲಿ ಸರಿಯಾಗಿ ನಡೆಯುತ್ತಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಕೆಲಸ ಸರಿಯಾಗಿ ನಡೆಸುವಂತೆ ಬೇಕಾದರೆ ಏರ್ಪಾಡು ಮಾಡುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಆ ಟ್ರಾಕ್ಟರುಗಳನ್ನು ಕೊಟ್ಟಿದ್ದಾಗ್ಗೂ ಅವು ಸರಿಯಾಗಿ ಕೆಲಸ ಮಾಡದೆ, ಅಲ್ಲಿ ಏನೂ ಕೆಲಸ ನಡೆಯದೇ ಇರುವಂಥ ಸಂದರ್ಭಗಳು ತಮ್ಮ ಗಮನಕ್ಕೆ ಬಂದಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಬಂದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಹಾಗೆ ಅಂಥ ನಿದರ್ಶನಗಳನ್ನು ತಮ್ಮ ಗಮನಕ್ಕೆ ತಂದರೆ, ತಾವು ಅವರಿಂದ ವಸೂಲು ಮಾಡಿಕೊಂಡಿರತಕ್ಕ ಅಡ್ವಾನ್ಸು ಮೊಬಲಗನ್ನು

(ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.) ವಾಪಸ್ಸು ಕೊಡಿಸಲು ಅವರಿಗೆ ತಿಳುವಳಿಕೆ ಕೊಡುವಿರಾ ?

ಶ್ರೀ ಎಚ್. ಸಿದ್ದವೀರಪ್ಪನವರು.—ಆಗಲಿ, ನೋಡೋಣ.

ಶ್ರೀ ಟಿ. ಎ. ಮೂಡಲಗಿರಿಗೌಡರು (ಕುಣಿಗಲು).—11,400 ಗಂಟೆಗಳ ಕಾಲ ಕೆಲಸ ಮಾಡಿದೆಯೆಂದು ಉತ್ತರದಲ್ಲಿ ಹೇಳಿರುವುದು ಬುಲ್‌ಡೋಜರಿನಲ್ಲಿರುವ ಮಿಟರ್ ಲೆಕ್ಕದ ಮೇಲೆಯೋ ಅಥವಾ ಘಂಟೆ ಲೆಕ್ಕದ ಮೇಲೆಯೋ ?

Sri H. SIDDAVEERAPPA.— That means one and the same thing.

ಶ್ರೀ ಟಿ. ಎ. ಮೂಡಲಗಿರಿಗೌಡರು.— ಅದರಲ್ಲಿ ವ್ಯತ್ಯಾಸವಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಬಂದಿಲ್ಲ.

ಶ್ರೀ ಟಿ. ಎ. ಮೂಡಲಗಿರಿಗೌಡರು.—ಗಂಟೆ ಲೆಕ್ಕದ ಪ್ರಕಾರ ಕೆಲಸ ಮಾಡುವಾಗ 6 ಗಂಟೆ ಕೆಲಸ ಮಾಡಿದರೆ 8 ಗಂಟೆ ಮಾಡಿದೆಯೆಂದು ಡ್ರೈವರುಗಳು ಲೆಕ್ಕ ಹೇಳುವುದು ಗಮನಕ್ಕೆ ಬಂದಿದೆಯೇ ?

Sri H. SIDDAVEERAPPA.—I will get it verified.

ಶ್ರೀ ಟಿ. ಎ. ಮೂಡಲಗಿರಿಗೌಡರು.—ಆ ರೀತಿಯಲ್ಲಿ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪನವರು.—ಅನ್ಯಾಯವಾಗಿದ್ದರೆ ಸರಿಪಡಿಸುವುದಕ್ಕೆ ಸರ್ಕಾರದವರು ಸದಾ ಸಿದ್ಧವಾಗಿದ್ದಾರೆ.

ಶ್ರೀ ಟಿ. ಎ. ಮೂಡಲಗಿರಿಗೌಡರು.— 8 ಗಂಟೆಗಳ ಕಾಲಕ್ಕೆ ಅಡ್ವಾನ್ಸ್‌ಕೊಟ್ಟು ತೆಗೆದುಕೊಂಡು 6 ಗಂಟೆಗಳಕಾಲ ಕೆಲಸ ಮಾಡಿದ ಮೇಲೆ 8 ಗಂಟೆಗಳಾಗಿದೆಯೆಂದು ಹೇಳಿರುವ ಸಂದರ್ಭಗಳಲ್ಲಿ 2 ಗಂಟೆಗಳ ಛಾರ್ಜನ್ನು ವಾಪಸ್ ಮಾಡುವುದಕ್ಕೆ ಸಿದ್ಧವಾಗಿದ್ದೀರಾ ?

Sri H. SIDDAVEERAPPA.—If any case comes before me, I will examine it on its merits and take a decision.

ಶ್ರೀ ಟಿ. ಎ. ಮೂಡಲಗಿರಿಗೌಡರು.—ತಮ್ಮ ಇಲಾಖೆಯವರು ಆ ತರಹ ನಡೆಯುತ್ತಿರುವುದು ಸರಿಯಾಗಿದೆಯೆಂದು ವಾದ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಅವರು ಸರಿ, ಇವರು ಸರಿ ಎಂದು ಹೇಳುವ ಪ್ರಶ್ನೆ ಇಲ್ಲಿ ಬರುವುದಿಲ್ಲ.

ಶ್ರೀ ಟಿ. ಎ. ಮೂಡಲಗಿರಿಗೌಡರು.— ಡ್ರೈವರುಗಳು ಹೇಳುವ ಗಂಟೆ ನಿಯಮಾವಳಿಯನ್ನು ಅವರು ಹೇಳಿರುವುದೇ ಸರಿಯೆಂದು ಇಲಾಖೆಯವರು ಒಪ್ಪಿರುವುದು ಗಮನಕ್ಕೆ ಬಂದಿದೆಯೆ ?

Sri H. SIDDAVEERAPPA.—I will get it examined. Since I do not know further details, I am not entering into . . .

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು (ಮಳವಳ್ಳಿ).—ಬುಲ್‌ಡೋಜರುಗಳನ್ನು ಒಬ್ಬೊಬ್ಬರಿಗೆ ಎಷ್ಟು ಗಂಟೆ ಕೊಡಬೇಕೆಂಬುದಕ್ಕೆ ವಿಧಿಯೇನಾದರೂ ಇದೆಯೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಅದನ್ನು ಹಿಂದೆಯೇ ಹೇಳಿದ್ದೇನೆ.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು.— ಒಂದು ತಾಲ್ಲೂಕಿಗೆ 70 ಗಂಟೆಗಳ ಮೇಲೆ ಕೊಡುವುದಿಲ್ಲವೆಂದು ಕೆಲವು ಅಧಿಕಾರಿಗಳು ಹೇಳಿರುವುದು ಗೊತ್ತೆ ?

Sri H. SIDDAVEERAPPA.—I have already answered it, Sir.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು.— ಕೆಟ್ಟುಹೋಗಿರುವುದನ್ನು ರಿಪೇರಿ ಮಾಡಲು ವರ್ಕ್‌ಷಾಪ್ ಇದೆಯೆ ?

Sri H. SIDDAVEERAPPA.—Sir, may I submit for the information of the House, that recently Government have thought of introducing a new system in order to see that all these machines are rejuvenated and put on the land.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು— ಈ ವರ್ಕ್‌ಷಾಪ್‌ಗೆ ತಜ್ಞರಾದ ಅಧಿಕಾರಿಗಳನ್ನು ನೇಮಕ ಮಾಡಿದೆಯೆ?

(ಉತ್ತರವಿಲ್ಲ.)

ಶ್ರೀ ಎಸ್. ಎಂ. ಮರಿಯಪ್ಪನವರು (ಪೆರಿಯಾಪಟ್ಟಣ).—ಈ ಬುಲ್‌ಡೋಜರುಗಳಿಗೆ ಹೆಚ್ಚು ಆಹಾರ ಬೆಳೆಯುವ ಯೋಜನೆ ಫಂಡಿನಿಂದ ಹಣ ತೆಗೆದುಕೊಂಡಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ನೋಟೀಸ್.

ಶ್ರೀ ಎಸ್. ಎಂ. ಮರಿಯಪ್ಪನವರು.—ಖಾಸಗೀ ಜನರ ಹತ್ತಿರ ಬುಲ್‌ಡೋಜರುಗಳು ಕೆಲಸ ಮಾಡುವಾಗ ಕೆಲಸ ಮಾಡದಿರುವ ದಿವಸಗಳನ್ನು ವರದಿಮಾಡಿರುವ ಅಧಿಕಾರಿಗಳು ಯಾರು?

Mr. SPEAKER.—That question need not be answered. It has so many details. How can the Hon'ble Member expect the Hon'ble Minister to answer them?

Sri H. S. RUDRAPPA (Honnali).—Do Government intend to purchase some more bulldozers?

Sri H. SIDDAVEERAPPA.—I have already answered that question, Sir.

ಶ್ರೀ ಜಿ. ಬಸಪ್ಪನವರು (ಹೊಸದುರ್ಗ).—ಈ 25 ಬುಲ್‌ಡೋಜರುಗಳಿಗೆ ಸಿಬ್ಬಂದಿ ನೇಮಕವಾಗಿದೆಯಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಹೌದು.

ಶ್ರೀ ಜಿ. ಬಸಪ್ಪನವರು.—ಕೆಟ್ಟುಹೋಗಿರುವ ಏಳು ಬುಲ್‌ಡೋಜರುಗಳ ಸಿಬ್ಬಂದಿಗೆ ಒಂದು ವರ್ಷದಿಂದ ಸುನ್ಮಾನೆ ಸಂಬಳ ಕೊಡುತ್ತಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಅವರು ಈಗ ಸರ್ವಿಸ್ಸಿನಲ್ಲಿದ್ದಾರೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡರು (ಸಾಗರ—ಹೊಸನಗರ).— ಈ ಬುಲ್‌ಡೋಜರುಗಳನ್ನು ಯಾವ ಕಂಪೆನಿಯಿಂದ ಕೊಂಡಿರುವುದು?

Sri H. SIDDAVEERAPPA.—As I have already said, Sir, ten of these bulldozers were purchased in the year 1946 from the Government of India out of war disposals. The rest were purchased from Messrs. Faiz Bhai Patel, Bombay.

ಶ್ರೀ ಎಸ್. ಗೋಪಾಲಗೌಡರು. — ಈ ಸ್ಪೇರ್ ಪಾರ್ಟ್ಸ್ ನಮ್ಮ ದೇಶದಲ್ಲಿ ಯಾವ ಕಂಪೆನಿಯಲ್ಲೂ ತಯಾರಾಗುವುದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಇಲ್ಲ.

Sri R. ANANTHARAMAN (Chamarajapet—Bangalore). —Are there applications from very big land holders for the purchase of these bulldozers on hire-purchase system?

ಶ್ರೀ ಎಚ್. ಸಿದ್ದವೀರಪ್ಪನವರು.—ಅಂಥವರಿಂದ ಬುಲ್‌ಡೋಜರಿಗೆ ಯಾವುದೂ ಬಂದ ಹಾಗೆ ಜ್ಞಾಪಕವಿಲ್ಲ.

Sri R. ANANTHARAMAN.—If in future such applications are made, are the Government prepared to sell the bulldozers?

Sri H. SIDDAVEERAPPA.—How can the Government sell them when the existing needs are not fully met with?

Sri R. ANANTHARAMAN.—How many acres of land have been reclaimed after the purchase of these bulldozers?

Sri H. SIDDAVEERAPPA.— I remember, Sir, that in answer to a previous question I have already given the information.

Sri M. PALANIYAPPAN (Ulsoor).—Who are all the Committee Members?

Mr. SPEAKER.—Each District will have a Committee.

Sri H. SIDDAVEERAPPA.—I want notice, Sir.

Sri M. PALANIYAPPAN.—Is there a Central Committee to purchase these bulldozers?

Sri H. SIDDAVEERAPPA.—There is no such Central Committee.

Sri M. PALANIYAPPAN.—Are there districtwar Committees?

Sri H. SIDDAVEERAPPA.—I have already submitted that there are Committees for districts.

Sri M. PALANIYAPPAN.—May we know the names of Committee Members?

Sri H. SIDDAVEERAPPA.— Notice, Sir.

Sri M. PALANIYAPPAN —I want to know who are all the members of the Committees, district by district?

Sri H. SIDDAVEERAPPA.— Notice, Sir.

Sri M. PALANIYAPPAN.—Has it come to the notice of the Government that these bulldozers have been given only to their favourites ?

Sri H. SIDDAVEERAPPA.—Not at all. Government have no favourites.

ಶ್ರೀ ಎಂ. ರಾಜಶೇಖರಮೂರ್ತಿಯವರು (ಯಳಂದೂರು).— ಬುಲ್‌ಡೋಜರು 10 ಗಂಟೆಗಳು ಕೆಲಸ ಮಾಡಿದ್ದರೂ 8 ಘಂಟೆಗಳಿಗೆ ಛಾರ್ಜು ವಸೂಲು ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಬಂದಿಲ್ಲ.

ಶ್ರೀ ಎಂ. ರಾಜಶೇಖರಮೂರ್ತಿಯವರು.—ಡ್ರೈವರುಗಳು 8 ಘಂಟೆಗಳು ಕೆಲಸ ಮಾಡುವುದಕ್ಕೆ ಬದಲಾಗಿ 11-12 ಗಂಟೆಗಳು ಕೆಲಸ ಮಾಡುವುದು ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಇಲ್ಲ. ಇದೇ ಮೊದಲನೆಯ ಸಲ ಗಮನಕ್ಕೆ ಬರುತ್ತಿರುವುದು.

Mr. SPEAKER.—Even then, there is no concrete instance.

ಶ್ರೀ ಬಿ. ರಾಚಯ್ಯನವರು (ಯಳಂದೂರು—ಅನುಸೂಚಿತ ಜಾತಿಗಳು).—ಯಾವ ಯಾವ ತರಹ ಜಮೀನಿಗೆ ಈ ಬುಲ್‌ಡೋಜರನ್ನು ಉಪಯೋಗಿಸಬಹುದು ?

ಶ್ರೀ ಎಚ್. ಸಿದ್ದವೀರಪ್ಪನವರು.—ಎಲ್ಲಾ ತರಹ ಜಮೀನುಗಳಿಗೂ, ಎಲ್ಲೆಲ್ಲಿ ಹೆವಿ ಮ್ಯಾನ್ಯುಯಲ್ ಲೇಬರ್ ಬೇಕೋ, ಜಮೀನನ್ನು ಎಲ್ಲಿ ಸಮಮಾಡಬೇಕೋ, ತಗ್ಗುದಿಣ್ಣೆ ಸಮಮಾಡುವುದಕ್ಕೆ ಎಲ್ಲಿ ಆವಶ್ಯಕವೋ ಅಂಥಹ ಕಡೆಗಳಲ್ಲಿ ಉಪಯೋಗಿಸಬಹುದು.

Mysore Implements Factory workers thrown out of employment.

Q.—467. **Sri D. R. KARI GOWDA** (Hassan).—

Will the Government be pleased to state :—

(*a*) the number of workers that have been thrown out recently from the Mysore Implements Factory and the reasons therefor ;

(*b*) whether Government have fixed the number of workers to be in a second grade factory and to which grade the Implements Factory belongs;

(*c*) out of the thrown-out workers, the number on monthly salary and the number on daily wages ;

(*d*) the length of service of workers thrown out ?

A.—**Sri T. SIDDALINGAIYA** (Minister for Industries).—

(*a*) 56. Due to continued slump in the market, large quantity of articles manufactured in the Mysore Implements Factory, Hassan, were remaining unsold for a very long time, and the factory was incurring heavy losses for the past few months, as a result of increased operational expenditure. To keep the factory running, it was found necessary to retrench superfluous staff and labour as one of the measures of urgent economy.

(*b*) Factories employing 300 workers and below are treated as second grade factories. The Mysore Implements Factory belongs to the second grade.

(*c*) 48 pure labour, 7 daily rated staff on muster roll and one on monthly rated salary.

(*d*) 11 years and below.

ಶ್ರೀ ಡಿ. ಆರ್. ಕರಿಗೌಡರು.—ಎಷ್ಟು ವರ್ಷಗಳಿಂದ ಮಾರಾಟವಾಗದೆ ಹೆಚ್ಚು ಸಾಮಾನು ಉಳಿದಿದೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.-ನಾಲ್ಕೈದು ವರ್ಷಗಳಿಂದ ಹಾಗೆಯೇ ನಿಂತಿವೆ.

ಶ್ರೀ ಡಿ. ಆರ್. ಕರಿಗೌಡರು.—ಸುಮಾರು ಎಷ್ಟು ಲಕ್ಷ ರೂಪಾಯಿಗಳ ಸಾಮಾನು ಮಾರಾಟವಾಗದೆ ಉಳಿದಿದೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಉಳಿದಿರುವ ಸಾಮಾನುಗಳು according to the accounts, come to five lakhs of rupees.

ಶ್ರೀ ಡಿ. ಆರ್. ಕರಿಗೌಡರು.—ಅದನ್ನು ಮಾರುವುದಕ್ಕೆ ಏಜನ್ಸಿ ಏರ್ಪಾಡು ಮಾಡಿದೆಯೆ ?

Sri T. SIDDALINGAIYA.—Yes. We are now giving 22½ per cent commission on the sales to the agents.